ವಿಚಾರ ಲಹರಿ

# ಮನಸ್ಸು, ಸಂಸ್ಕಾರ ಇತ್ಯಾದಿ

ಧಮ್ಮಪದದ ಮೊದಲನೆ ಗಾಥೆ ವಿಶ್ವವಿಖ್ಯಾತವಾದದ್ದು. ಪಾಲಿ ಭಾಷೆಯಲ್ಲಿ ಅದು ಹೀಗಿದೆ.

ಮನೋಪುಬ್ಬಾಂಗಮಾ ಧಮ್ಮ
ಮನೋಸೇಠಾ ಮನೋಮಯ
ಮನಸಾ ಚೆ ಪುದುಠ್ಠೇನ
ಬಾಸತಿ ವಾ ಕರೋತಿ ವಾ
ತತೋ ನಂ ದುಖಃ ಮನ್ವೇತಿ
ಚಕ್ಕಾಂ ವಾ ಮಹತೋ ಪದಂ

ಅಂದರೆ ನಮ್ಮ ಎಲ್ಲ ಸ್ವಭಾವಗಳಿಗೆ ಮನಸ್ಸೇ ಮೂಲ. ಎಲ್ಲ ಸೃಷ್ಟಿಗಳಿಗೂ ಮನಸ್ಸೇ ಕಾರಣ. ಕಲುಷಿತ ಮನಸ್ಸಿನಿಂದ ಯಾರು ಯೋಚಿಸುತ್ತಾರೆಯೋ ಅಥವಾ ಕರ್ಮ ಮಾಡುತ್ತಾರೆಯೋ ಅವರನ್ನು ದು:ಖ ಎತ್ತಿನ ಕಾಲುಗಳ ಹಿಂದೆ ಚಕ್ರಗಳು ಹಿಂಬಾಲಿಸುವಂತೆ ಹಿಂಬಾಲಿಸುತ್ತವೆ. ಹಾಗೆಯೇ ಇದರ ಜೋಡಿ ಗಾಥೆಯಲ್ಲಿ, ಯಾರು ಪ್ರಸನ್ನ ಚಿತ್ತದಿಂದ ಆಲೋಚಿಸುತ್ತಾರೋ ಅಥವಾ ಕರ್ಮ ಮಾಡುತ್ತಾರೋ ಅವರನ್ನು ಸುಖವು ನೆರಳಿನಂತೆ ಹಿಂಬಾಲಿಸುತ್ತದೆ.

ಬುದ್ಧನ ಈ ಬೋದನೆ ಸರ್ವ ಸಮ್ಮತವೂ, ಸಾರ್ವಕಾಲಿಕವೂ ಆಗಿದೆ. ಹುಟ್ಟುವಾಗ ಎಲ್ಲರ ಮೆದುಳು ಒಂದೇ ಆಗಿರುತ್ತದೆ. ಬುದ್ಧಿ ಭಾವಗಳ ಅಭ್ಯುದಯಕ್ಕೆ ಮಗು ಸ್ವಚ್ಛ ನೆಲ. ಹಾಗಾದರೆ ಮನಸ್ಸು ಕಲುಷಿತಗೊಳ್ಳುವುದು ಯಾವಾಗ? ಪ್ರಸನ್ನವಾಗಿರುವುದು ಹೇಗೆ? ಸಾಮಾನ್ಯವಾಗಿ ಮನುಷ್ಯನ ಸ್ವಭಾವವನ್ನು ಅವನ ಸಂಸ್ಕಾರಕ್ಕೆ ಆರೋಪಿಸಿ ಬಿಡುತ್ತೇವೆ. ಹಾಗಾದರೆ ಸಂಸ್ಕಾರ ಎಂದರೆ ಏನು? ಅದೊಂದು ಆಚರಣೆಗಳ ಮೊತ್ತವೆ? ಜ್ಞಾನ ಸಂಗ್ರಹಣೆಯೆ? ಉಪದೇಶಗಳ ಪಾಲನೆಯೆ? ಅದನ್ನು ಒಪ್ಪಿಕೊಂಡುಬಿಟ್ಟರೆ ಬೇರೆ ಬೇರೆ ದೇಶ, ಪ್ರದೇಶಗಳಲ್ಲಿ ಇವೆಲ್ಲವೂ ಭಿನ್ನ ಸ್ವರೂಪದಲ್ಲಿರುವುದಲ್ಲ! ಉಪನಿಷತ್ಕಾರರ ಪ್ರಕಾರ ತಿನ್ನುವ ಅನ್ನವೂ ಮನಸ್ಸನ್ನು ರೂಪಿಸುತ್ತದೆ. ಆದರೆ ಲೋಕದ ಎಲ್ಲ ಮಾನವರು ಒಂದೇ ರೀತಿಯ ಆಹಾರವನ್ನು ಸೇವಿಸುವುದಿಲ್ಲವಲ್ಲ!

ಮನುಷ್ಯನೂ ಪ್ರಾಣಿ ಸಂಕುಲಕ್ಕೆ ಸೇರಿದವನಾದ್ದರಿಂದ ಪ್ರಾಣಿ ಸಹಜ ಮೂಲ ಪ್ರವೃತ್ತಿ ಇದ್ದೇ ಇದೆ. ಅಂದರೆ ತನ್ನ ಬೇಕುಗಳನ್ನು ಪಡೆದುಕೊಳ್ಳುವುದು, ಇಚ್ಛೆಗಳನ್ನು ಈಡೇರಿಸಿಕೊಳ್ಳುವುದು, ಅದು ಸ್ವಾರ್ಥವಾದ್ದರಿಂದ ಇನ್ನೊಬ್ಬರಿಗೆ ಹಾನಿಯುಂಟು ಮಾಡುತ್ತದೆ. ಕಾಲಾಂತರದಲ್ಲಿ ಮನುಷ್ಯ ಸಮಾಜ ಜೀವಿಯಾಗಿರುವುದರಿಂದ ಅರಣ್ಯ ನ್ಯಾಯ ಇಲ್ಲಿ ಅನ್ವಯಿಸುವುದಿಲ್ಲ. ಆದ್ದರಿಂದ ಇತರರ ಬೇಕುಗಳನ್ನು ಗೌರವಿಸುವುದೂ ಮುಖ್ಯ. ಈ ಇತರರ ಒಳಿತನ್ನು ಬಯಸುವುದು, ಇತರರ ಕನಿಷ್ಠ ಬೇಕುಗಳನ್ನು ಗೌರವಿಸುವ ಮನಸ್ಸನ್ನು ಬುದ್ಧ ಕುಶಲ ಮನಸ್ಸು ಎಂದು ಕರೆಯುತ್ತಾನೆ. ತನ್ನ ಒಳಿತಿಗೂ, ಇತರರ ಒಳಿತಿಗೂ ಮಾಡುವ ಕರ್ಮಗಳನ್ನು ಕುಶಲ ಕರ್ಮವೆಂದಿದ್ದಾನೆ. ಇದ್ದಕ್ಕೆ ವಿರುದ್ಧವಾದದ್ದು ಅಕುಶಲವೆನಿಸುತ್ತದೆ.

ಎರಡು ವರ್ಷಗಳ ಹಿಂದೆ ಜಪಾನಿನಲ್ಲಿ ಸುನಾಮಿ ಅಲೆಯೆದ್ದು ಒಂದು ನಗರವನ್ನೆ ಕಬಳಿಸಿತು. ಜನ ದಿಕ್ಕಾಪಾಲಾದರು. ಮನೆಮಠಗಳನ್ನು ಕಳೆದುಕೊಂಡರು. ಅನ್ನನೀರಿಲ್ಲದೆ ಅನಾಥರಾದರು. ಸರ್ಕಾರ ಸಂತ್ರಸ್ತರಿಗೆ ಪಡಿತರದ ಮೂಲಕ ಬ್ರೆಡ್, ಹಾಲು ಮತ್ತಿತರ ಅಗತ್ಯ ವಸ್ತುಗಳನ್ನು ಪೂರೈಸಿತು. ಜನ ಸಾಲಾಗಿ ಸರತಿಯಲ್ಲಿ ನಿಂತು ತಮಗೆ ಬೇಕಾದಷ್ಟನ್ನು ಮಾತ್ರ ಪಡೆದುಕೊಳ್ಳುತ್ತಿದ್ದರು. ಪೆಟ್ರೋಲ್ ಬಂಕ್‌ಗಳಲ್ಲಿ ತಮಗೆ ಅಗತ್ಯವಿದ್ದಷ್ಟು ಪಡೆದು ಇತರರ ವಾಹನಗಳಿಗೂ ಇಂಧನ ಸಿಗುವಂತೆ ನೋಡಿಕೊಳ್ಳುತ್ತಿದ್ದರು. ತಿಂಗಳೊಪ್ಪತ್ತಿನಲ್ಲಿ ರಸ್ತೆಗಳು ಮೊದಲಿನಂತಾದವು. ಜನ ಸರ್ಕಾರದ ಜೊತೆ ಕೈಜೋಡಿಸಿ ದುಡಿದರು.

ಕಳೆದ ವರ್ಷ ಉತ್ತರಕಾಂಡದಲ್ಲಿ ಭೂಕಂಪನವಾಯಿತು. ಹೇಳಿಕೇಳಿ ಅದು ದೇವಭೂಮಿ. ದೇವಸ್ಥಾನಗಳು ಕುಸಿದವು. ಅಲ್ಲೋಲ ಕಲ್ಲೋಲವಾಯಿತು. ಯಾತ್ರಿಕರು ಅತಂತ್ರರಾದರು. ಸರ್ಕಾರ ಎಂದಿನಂತೆ ಪರಿಹಾರಕ್ಕೆ ಮುಂದಾಯಿತು. ಹೆಲಿಕಾಪ್ಟರುಗಳಿಂದ ಆಹಾರ ಪೊಟ್ಟಣಗಳನ್ನು, ನೀರು ಬಾಟಲಿಗಳನ್ನು ಜನಸಂದಣಿಯಿದ್ದಲ್ಲಿ ಇಳಿಸಿದರು. ಆದರೆ, ಅವುಗಳನ್ನು ಕೆಲವು ಘಟಿಂಗರು ಲಪಟಾಯಿಸಿದರು. ಅದೇ ಜನಕ್ಕೆ ಆಹಾರ ಪೊಟ್ಟಣಗಳನ್ನು, ನೀರು ಬಾಟಲಿಗಳನ್ನು ಕಾಸಿಗೆ ಮಾರಿಕೊಂಡರು. ಹಿಂಸೆಯ, ಅತ್ಯಾಚಾರದ ವರದಿಗಳೂ ಕೇಳಿಬಂದವು. ಜನಸಮುದಾಯವೇ ಆದ ಈ ಎರಡು ಗುಂಪುಗಳಲ್ಲಿ ಯಾಕಿಷ್ಟು ವ್ಯತ್ಯಾಸ? ಅಂದರೆ ಇಲ್ಲಿ ಕುಶಲ ಮನಸ್ಸುಗಳು ಇರಲಿಲ್ಲವೆಂದಲ್ಲ. ಅಲ್ಲಿ ಅಕುಶಲ ಮನಸ್ಸುಗಳು ಇರಲಿಲ್ಲವೆಂತಲೂ ಅಲ್ಲ. ಸಮಷ್ಟಿ ಮನಸ್ಸಿಗೆ ಶಕ್ತಿ ತುಂಬುವ ಮನಸ್ಸು ಹೇಗಿರುತ್ತದೋ, ಅತ್ತ ಕಡೆ ತಕ್ಕಡಿ ವಾಲುತ್ತದೆ.

■ ಮೂಚಿ

## ಮಾತೇ ಮುತ್ತು

★ ಭ್ರಷ್ಟಾಚಾರ ಒಂದು ರೋಗವಲ್ಲ, ಅದು ರೋಗದ ಲಕ್ಷಣ. ರೋಗ ಸಮಾಜದಲ್ಲಿದೆ. ಸರ್ಕಾರದ ಭ್ರಷ್ಟಾಚಾರ– ಒಂದು ಸಮಾಜ ಭ್ರಷ್ಟವಾಗಿರುವುದರ ಮೂರ್ತಸ್ವರೂಪ.

–ಲೋಕೋಕ್ತಿ

★ ಎಷ್ಟೇ ದೊಡ್ಡ ವ್ಯಕ್ತಿಯಾದರೂ, ಕಾನೂನು ಅವನಿಗಿಂತ ಎತ್ತರದಲ್ಲಿದೆ.

–ಸುಭಾಷಿತ

★ ಪ್ರಯತ್ನಿಸುತ್ತಲೇ ಇರಿ. ಪ್ರತಿಯೊಂದು ವೈಫಲ್ಯವೂ ಯಶಸ್ಸಿನೆಡೆಗೆ ಇಟ್ಟ ಒಂದು ಹೆಜ್ಜೆ ಯಾಗಿರುತ್ತದೆ.

–ಥಾಮಸ್ ಜೆ. ವಿಲಾರ್ಡ್

★ ಅಹಿಂಸೆಯ ಪೂರ್ಣ ಸ್ಥಿತಿ ತಲುಪಿದಾಗ ಅವನ ಸಾನಿಧ್ಯದಲ್ಲಿ ಎಲ್ಲ ಪ್ರಾಣಿಗಳು ನಿಶ್ಚಿಂತೆಯಿಂದಿರುತ್ತವೆ.

–ಯೋಗ ದರ್ಶನ

★ ಅತ್ಯಾಚಾರ ಮಾಡುವವನಿಗಿಂತಲೂ ಅವನನ್ನು ಸಹಿಸುವವನ ದೋಷ ದೊಡ್ಡದು.

–ಲೋಕಮಾನ್ಯ ತಿಲಕ್

★ ದುಃಖಿಯ ಬಗ್ಗೆ ದಯೆ ತೋರಿಸುವುದು ಮಾನವೋಚಿತವಾದದ್ದು, ಅವನ ದುಃಖ ನಿವಾರಣೆ ಮಾಡುವುದು ದೇವೋಚಿತವಾದದ್ದು.

–ಮದರ್ ತೆರೇಸಾ

★ ಬೇರೆಯವರು ನಿನ್ನನ್ನು ಒಳ್ಳೆಯವನು ಎಂದು ಹೇಳುತ್ತಿರುವಾಗ, ನಿನ್ನ ಬಗ್ಗೆ ನೀನೇ, 'ನಾನು ಒಳ್ಳೆಯವನು' ಎಂದು ಎಂದಿಗೂ ಹೇಳಿಕೊಳ್ಳಬೇಡ.

–ಫೈಸ್ಕಲ್

★ ಸ್ವಾತಂತ್ರ್ಯವನ್ನು ಯಾರೂ ಕೊಡುವುದಿಲ್ಲ, ಅದನ್ನು ಹೋರಾಟದಿಂದಲೇ ಪಡೆದುಕೊಳ್ಳಬೇಕು.

–ಸುಭಾಶ್ಚಂದ್ರ ಬೋಸ್

★ ಪ್ರತಿಯೊಂದು ಸಮಸ್ಯೆಗೆ ಉತ್ತರ ಇರುತ್ತದೆ. ಈ ನಂಬಿಕೆ ನಿಮ್ಮಲ್ಲಿ ಇದ್ದಾಗ ಕಷ್ಟಗಳು ಸುಲಭವಾಗಿ ಪರಿಹಾರವಾಗುತ್ತವೆ.

–ಆಲೂರು ವೆಂಕಟರಾಯರು

★ ತನ್ನ ಸಹೋದ್ಯೋಗಿಗಳಿಗೆ ಅವರವರ ಯೋಗ್ಯತಾನುಸಾರ ಸ್ಥಾನ ಕಲ್ಪಿಸಲು ಸಾಧ್ಯವಿದ್ದವನು, ಅದನ್ನು ಮಾಡದೇ ಹೋದರೆ ಅಂತಹವನನ್ನು ಪುಕ್ಕಲು ಸರ್ವಾಧಿಕಾರಿ ಅನ್ನಬಹುದೇ ಹೊರತು, ಅವನೆಂದೂ ನಾಯಕ ಆಗಲಾರನು.

–ಅನುಭವಾಮೃತ

★ ನಿಮ್ಮ ಮಿತ್ರನನ್ನು ಏಕಾಂತದಲ್ಲಿ ನಿಂದಿಸಿ, ಆದರೆ ಎಲ್ಲರೆದುರು ಅವನನ್ನು ಪ್ರಶಂಸೆ ಮಾಡಿ.

–ಎಮರ್ಸನ್

★ ಸಮಯ ಎನ್ನುವುದು ವೃದ್ಧ ನ್ಯಾಯಾಧೀಶನಿದ್ದಂತೆ, ಎಲ್ಲಾ ಅಪರಾಧಗಳನ್ನು ಪರೀಕ್ಷಿಸುತ್ತದೆ.

–ಜಾನ್ ಎಫ್ ಕೆನಡಿ

★ ಆರೋಗ್ಯವನ್ನು ಯಾವುದೇ ಅನಿಶ್ಚಿತ ಲಾಭಕ್ಕಾಗಿ ಹಾಳು ಮಾಡಿಕೊಳ್ಳುವುದು ಮಹಾ ಮೂರ್ಖತನ.

–ಪಿ.ಬಿ.ಶೆಲ್ಲಿ